# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 624 (647)
ಮಾನ್ಯ ಸದಸ್ಯರ ಹೆಸರು: ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸಬೇಕಾದ ದಿನಾಂಕ: 22.07.2024.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಈ ಬಗ್ಗೆ ಅಧ್ಯಯನ/ ಸಮೀಕ್ಷೆ ನಡೆಸಿದೆಯೇ; ಈ ಅಧ್ಯಯನ/ ಸಮೀಕ್ಷೆಗಳ ಸಾರಾಂಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು). | 2024-25ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು EDCS ನಿರ್ದೇಶನಾಲಯದಿಂದ ಅಭಿವೃದ್ಧಿಪಡಿಸಿರುವ ಮೊಬೈಲ್ ಅಪ್ಲಿಕೇಷನ್ ಅನ್ನು ಬಳಸಿ RDPR, UDD ಮತ್ತು BBMP ಇಲಾಖೆಗಳಿಂದ ಮನೆ-ಮನೆ ಸಮೀಕ್ಷೆಯನ್ನು ಕೈಗೊಂಡು ಜುಲೈ 31 ರೊಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸುವಂತೆ ಕ್ರಮವಹಿಸಲಾಗಿದೆ. |
| ಇ) | ಕೋವಿಡ್-19ರ ನಂತರ 9 ರಿಂದ 14 ವಯಸ್ಸಿನ ಗ್ರಾಮಾಂತರ ಪ್ರದೇಶದ ಮಕ್ಕಳು ಮನೆಕೆಲಸ ಮತ್ತು ಹೊಲದಲ್ಲಿ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದರಿಂದ ಅವರುಗಳು ಮರಳಿ ಶಾಲೆಗೆ ಬರುತ್ತಿಲ್ಲದಿರುವುದರಿಂದ ರಾಜ್ಯ ಸರ್ಕಾರ ವಹಿಸಿರುವ ಕಾಳಜಿಯೇನು; (ಪೂರ್ಣ ಮಾಹಿತಿ ನೀಡುವುದು). | ಪ್ರೌಢ ಶಿಕ್ಷಣ ಪೂರ್ಣಗೊಳ್ಳುವವರೆಗೆ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಪ್ರೋತ್ಸಾಹಿಸಲು ಸರ್ಕಾರಿ ಮತ್ತು ಅನುದಾನಿತ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟ, ಕ್ಷೀರಭಾಗ್ಯ, ಉಚಿತ ಪಠ್ಯ ಪುಸ್ತಕಗಳು, ನೋಟ್ ಪುಸ್ತಕಗಳು ಮತ್ತು ಸಮವಸ್ತ್ರದಂತಹ ಸೌಲಭ್ಯಗಳನ್ನು ಇಲಾಖೆಯಿಂದ ಒದಗಿಸಲಾಗುತ್ತಿದೆ. ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದಿರುವ ಈ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರವು ಈ ಕೆಳಕಂಡ ಕಾರ್ಯತಂತ್ರಗಳನ್ನು ರೂಪಿಸಿದೆ.<br>• 12 ತಿಂಗಳ ವಸತಿಯುತ ವಿಶೇಷ ತರಬೇತಿ (12 months RST).<br>• 6 ತಿಂಗಳ ವಸತಿ ರಹಿತ ವಿಶೇಷ ತರಬೇತಿ (6 months NRST).<br>• ವಲಸಿತ ಕುಟುಂಬಗಳ ಮಕ್ಕಳಿಗಾಗಿ ವಿಶೇಷ ತರಬೇತಿ (ಟೆಂಟ್ ಶಾಲೆ) (6 months RST).<br>• ಶಾಲಾ ಆಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕ ಸಹಿತ) (6 ತಿಂಗಳ ಅವಧಿಗೆ).<br>• 6 ತಿಂಗಳ ಋತುಮಾನ ವಸತಿಯುತ ಕೇಂದ್ರ (6 months SRST).<br>• 3 ತಿಂಗಳ ವಸತಿ ಸಹಿತ ವಿಶೇಷ ತರಬೇತಿ (3 months RST).<br>• 3 ತಿಂಗಳ ವಸತಿ ರಹಿತ ವಿಶೇಷ ತರಬೇತಿ (3 months RST). |
| ಈ) | ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳು ಮತ್ತು ವಿಶೇಷ ಚೇತನ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರ ನಡೆಸಿರುವ ಪ್ರಯತ್ನಗಳು/ ಕ್ರಮಗಳು | **ವಲಸಿಗ /ಕೂಲಿಕಾರರ ಮಕ್ಕಳ ಶಿಕ್ಷಣಕ್ಕಾಗಿ ಕೈಗೊಂಡ ಕ್ರಮ**<br>ರಾಜ್ಯದಲ್ಲಿ ವಲಸೆ ಮಕ್ಕಳನ್ನು ಪತ್ತೆ ಹಚ್ಚಿ ಶಿಕ್ಷಣದ ಮುಖ್ಯ ವಾಹಿನಿಗೆ ತರಲು ಸರ್ಕಾರದ ಆದೇಶ ಸಂಖ್ಯೆ:ಇಡಿ 05 ಮಾಹಿತಿ 2019, ದಿನಾಂಕ:09.12.2019ರ "**ವಲಸಿಗ ಮಕ್ಕಳ ಹಾಗೂ ವಲಸಿಗ/ಕೂಲಿಕಾರರ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯ ನೀತಿ – 2019**" ಅನ್ನು ಅನುಷ್ಠಾನಗೊಳಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು |

| | | |
|---|---|---|
| | ಯಾವುವು? (ಪೂರ್ಣ ಮಾಹಿತಿ ನೀಡುವುದು). | ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಭಾಗಿತ್ವದೊಂದಿಗೆ ವಲಸೆ/ಕೂಲೀಕಾರರ ಮಕ್ಕಳನ್ನು ಪತ್ತೆ ಹಚ್ಚಿ ಶಿಕ್ಷಣದ ಮುಖ್ಯವಾಹಿನಿಗೆ ತರಲು ಕಾರ್ಯತಂತ್ರಗಳನ್ನು ರೂಪಿಸಲಾಗಿದೆ. ವಲಸೆ/ಕೂಲಿಕಾರರ ಮಕ್ಕಳನ್ನು ಶಿಕ್ಷಣ ಮುಖ್ಯವಾಹಿನಿಗೆ ತರಲು ದುರ್ಬಲ ಮತ್ತು ಅವಕಾಶ ವಂಚಿತ ಮಕ್ಕಳಿಗೆ ಹಾಗೂ ವಲಸಿತ ಮಕ್ಕಳಿಗೆ ನೇತಾಜಿ ಸುಭಾಷ್ ಚಂದ್ರ ಬೋಸ್ ವಸತಿ ಶಾಲೆ, ಕಸ್ತೂರ ಬಾ ಗಾಂಧಿ ಬಾಲಿಕಾ ವಸತಿ ನಿಲಯ, ಕರ್ನಾಟಕ ಕಸ್ತೂರ ಬಾ ಗಾಂಧಿ ವಸತಿ ಶಾಲೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳ ವಸತಿ ನಿಲಯಗಳಲ್ಲಿ ದಾಖಲಾತಿಗೆ ಅವಕಾಶ ಕಲ್ಪಿಸಲಾಗುತ್ತಿದೆ.<br><br>• House to House survey, school based survey ಗಳಿಂದ ಶಾಲೆಯಿಂದ ಹೊರಗುಳಿದಿರುವ ವಿಶೇಷ ಅಗತ್ಯವುಳ್ಳ (CwSN) ಮಕ್ಕಳನ್ನು ಗುರುತಿಸಲಾಗುತ್ತದೆ.<br>• ಇದರೊಂದಿಗೆ ಗ್ರಾಮ ಪಂಚಾಯಿತಿ ವಾರ್ಡ್ ಹಂತದಲ್ಲಿ ಹಾಗೂ ಶಿಕ್ಷಣ ಇಲಾಖೆಯ ಹಾಜರಾತಿ ಅಧಿಕಾರಿ ECO ರವರಿಂದ ವಿಶೇಷ ಅಗತ್ಯವುಳ್ಳ – ಶಾಲೆಯಿಂದ ಹೊರಗುಳಿದ (OoSC) ಮಕ್ಕಳನ್ನು ಗುರುತಿಸಲಾಗುತ್ತಿದೆ.<br>• ಗುರುತಿಸಲ್ಪಟ್ಟ OoSCಗಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಚಲನೆಯ ಸಾಮರ್ಥ್ಯ, ಕಲಿಕೆಗೆ ಗ್ರಹಿಕೆಯ ಮಟ್ಟ, ನ್ಯೂನತೆಯ ವಿಧ ಹಾಗೂ ನ್ಯೂನತೆಯ ತೀವ್ರತೆಯನ್ನು ಆಧರಿಸಿ ಅಂತಹ ಮಕ್ಕಳು ಶಾಲೆಗೆ ಹಾಜರಾಗಲು ಸಾಧ್ಯವಿದ್ದಲ್ಲಿ ಶಾಲೆಗೆ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ.<br>• ತೀವ್ರತರನಾದ ನ್ಯೂನತೆ ಅಥವಾ ತೀವ್ರತರನಾದ Loco motor disability ಹೊಂದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಗೃಹಧಾರಿತ ಮಕ್ಕಳೆಂದು ಪರಿಗಣಿಸಿ ಅಗತ್ಯ ಕೌಶಲಗಳ ತರಬೇತಿ ಒದಗಿಸಲಾಗುವುದು.<br>• ವಿಶೇಷ ಅಗತ್ಯವುಳ್ಳ OoSC ಗಳಿಗೆ ವಿಶೇಷ ಶಿಕ್ಷಕರ ಬೆಂಬಲ ನೀಡಲಾಗುತ್ತಿದೆ. ನ್ಯೂನ್ಯತೆಯ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಭತ್ಯೆಗಳಾದ ಸಾರಿಗೆ ಭತ್ಯೆ, ಬೆಂಗಾವಲ ಭತ್ಯೆ, ಒದುಗರ ಭತ್ಯೆ ಮತ್ತು ಹೆಣ್ಣು ಮಕ್ಕಳ ಭತ್ಯೆ ನೀಡಲಾಗುವುದು ಹಾಗೂ ಸಾಧನ-ಸಲಕರಣೆಗಳನ್ನು ಒದಗಿಸಲಾಗುವುದು. |

**ಇಪಿ 56 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು